**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಎಫ್.ಟಿ.ಎಸ್.ಸಿ.-1, ಹಾವೇರಿ.**
**ಎಸ್.ಸಿ. ನಂ. 18/2020**

PW-17
CW-04

| | |
|---|---|
| ಸಾಕ್ಷಿದಾರರ ಹೆಸರುಃ | ಸತೀಶ ಸಿದ್ದಪ್ಪ ತಳವಾರ |
| ತಂದೆ ಹೆಸರುಃ | ಸಿದ್ದಪ್ಪ ತಳವಾರ |
| ವಯಸ್ಸುಃ | 30 |
| ಉದ್ಯೋಗಃ | ದ್ವಿತೀಯ ದರ್ಜೆ ಸಹಾಯಕ , ಪುರಸಬೆ ಶಿಗ್ಗಾಂವಿ |
| ವಾಸ ಸ್ಥಳಃ | ಶಿಗ್ಗಾಂವಿ , ಹಾವೇರಿ |

ದಿನಾಂಕಃ **24.07.2025** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯ್ತು.

ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1) ನಾನು ಪುರಸಬೆ ಶಿಗ್ಗಾಂವಿಯಲ್ಲಿ ದ್ವಿತೀಯ ದರ್ಜೆ ಸಹಾಯಕ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ಚಾಸಾ-5 ಯಲ್ಲಪ್ಪ ನನಗೆ ಪರಿಚಯ. ಸದರಿಯವರು ಈಗ ಮೃತ ಪಟ್ಟಿರುತ್ತಾರೆ. ನನ್ನ ಹಾಗೂ ಅವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿದ್ದರು.

3) ದಿಃ 17.08.2019 ರಂದು ಚಾಸಾ-39 ಚಿದಾನಂದ ತನಿಖಾಧಿಕಾರಿಗಳು ನನ್ನನ್ನು ಹಾಗೂ ಚಾಸಾ5 ಯಲ್ಲಪ್ಪನನ್ನು ಶಾಂತಾಬಾಯಿ ಮಾಳವದೆಯವರ ಮನೆಗೆ ಪಂಚನಾಮೆ ಮಾಡಲು ಕರೆಸಿದ್ದರು.

4) ಪ್ರಾಸಾ-2 ರಾಮನಾಥ ರವರು ಕರೆಸಿದ್ದರು. ಆ ಪಂಚನಾಮೆ ಸಮಯದಲ್ಲಿ ಶವ ಇತ್ತು. ಪೋಲಿಸರು ಇದ್ದರು. ಶವ ಪಂಚನಾಮೆ ಸಮಯದಲ್ಲಿ ಮಂಚ ಇತ್ತು. ದಿಂಬು , ಬೆಡ್ ಶೀಟ್ , ದೀಪ ಇತ್ತು. ಕಡ್ಡಿಪೊಟ್ಟಣ ಮಂಚದ ಹತ್ತಿರ ಇತ್ತು. ಪ್ರಾಸಾ-2 ರಾಮನಾಥ ರವರು ಮೃತ ಶಾಂತಾಬಾಯಿ ಕೊಲೆಯಾಗಿದೆ ಎಂದು ನಮ್ಮ ಸಮಕ್ಷಮ ಹೇಳಿದರು. ಪೋಲಿಸರು ಪಂಚನಾಮೆ ಸಮಯದಲ್ಲಿ ಛಾಯಾಚಿತ್ರ ತೆಗೆದಿರುತ್ತಾರೆ. ನನ್ನ ಸಮಕ್ಷಮ ಪಂಚನಾಮೆಯನ್ನು ಜರುಗಿಸಲಾಯಿತು. ಸದರಿ ಪಂಚನಾಮೆಯನ್ನು ಮದ್ಯಾಹ್ನ 3.15 – 4.30 ವರೆಗೆ ಜರುಗಿಸಲಾಯಿತು. ಸದರಿ ಪಂಚನಾಮೆಯನ್ನು ಜರುಗಿಸುವಾಗ ನಕ್ಷೆಯನ್ನು ಸಹ ತೆಗೆದಿದ್ದರು .

5) ನಾನು ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ಈಗಾಗಲೆ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಾನು ಈಗ ಪಂಚನಾಮೆಯ ಸಮಯಂಲ್ಲಿ ನಕ್ಷೆಯನ್ನು ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದೆ. ಸದರಿ ನಕ್ಷೆಯನ್ನು ಈಗಾಗಲೆ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ನಿಪಿ-8 ಮತ್ತು 9 ಕ್ಕೆ ಚಾಸಾ-5 ಯಲ್ಲಪ್ಪ ಸಹಿ ಮಾಡಿರುತ್ತಾರೆ.

6) ದಿಂಬು ಇದ್ದು ಅದರ ಮೇಲೆ ರಕ್ತದ ಕಲೆಗಳು ಇದ್ದವು. ಗಾಜಿನ ಬಳೆಚೂರುಗಳು ಇದ್ದವು. ಗುಲಾಬಿ ಬಣ್ಣದ ಸ್ವೇಟರ್ ವಶ ಪಡಿಸಿಕೊಂಡರು. ಗಾದಿಯ ಮೇಲೆ ರಕ್ತದ ಕಲೆಗಳು ಇದ್ದವು. ಗಾದಿಯ ಮೇಲಿದ್ದ ಎರಡು ರಕ್ತದ ಕಲೆಗಳುಳ್ಳ ಗಾದಿಯನ್ನು ಎರಡು ಬಾಗವಾಗಿ ಕತ್ತರಿಸಿ ತೆಗೆದುಕೊಂಡರು. ಬಿಳಿ ಬಣ್ಣದ ಸೊಳ್ಳೆ ಪರದೇ ತೆಗೆದುಕೊಂಡರು. ಮತ್ತೆ ಏನು ತೆಗೆದುಕೊಂಡಿರುವುದಿಲ್ಲ.

7) ನಾನು ಈಗ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ದಿಂಬನ್ನು ನೋಡುತ್ತಿದ್ದು ಅದನ್ನು ನೋಡಿ ಗುರುತಿಸುತ್ತೇನೆ.

8) ನಾನು ಈಗ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ಬಳೆಚೂರುಗಳನ್ನು ನೋಡುತ್ತಿದ್ದು ಅದನ್ನು ನೋಡಿ ಗುರುತಿಸುತ್ತೇನೆ.

9) ನಾನು ಈಗ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ಇನ್ನೊಂದು ದಿಂಬನ್ನು ನೋಡುತ್ತಿದ್ದು ಅದನ್ನು ನೋಡಿ ಗುರುತಿಸುತ್ತೇನೆ.

10) ನಾನು ಈಗ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ಬೆಡಶೀಟನ್ನು ನೋಡುತ್ತಿದ್ದು ಅದನ್ನು ನೋಡಿ ಗುರುತಿಸುತ್ತೇನೆ.

11) ನಾನು ಈಗ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ಎರಡು ಗಾದಿಯ ತುಂಡುಗಳನ್ನು ನೋಡುತ್ತಿದ್ದು ಅವುಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೆ ಮುಮಾ-4 ರಿಂದ 8 ಎಂದು ಗುರುತಿಸಲಾಗಿದೆ. ಇವುಗಳನ್ನು ಹೊರತು ಪಡಿಸಿ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ.

12) ನಾನು ಈಗ ಪಂಚನಾಮೆ ಸಮಯದಲ್ಲಿ ಛಾಯಾಚಿತ್ರವನ್ನು ನೋಡುತ್ತಿದ್ದು ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿಯವುಗಳನನು ಈಗಾಗಲೆ ನಿಪಿ-10, 11 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಸಾಕ್ಷಿಯ ಹೇಳಿದ ಸಾಕ್ಷಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

13) ಮೃತ ಶಾಂತಾಬಾಯಿಯ ಕುತ್ತಿಗೆಗೆ ಸುತ್ತಿದ್ದ ಸೀರೆಗೆ ರಕ್ತ ಹತ್ತಿದ್ದು, ಅದನ್ನು ಸಹ ನನ್ನ ಸಮಕ್ಷಮ ವಶ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಹಿತ್ತಾಳೆಯ ದೀಪ ಹಾಗೂ ಕಡ್ಡಿಪೊಟ್ಟಣ ಹೊಸ್ತಿಲಿನ ಪಕ್ಕ ಕಂಡು ಬಂದವು ಎಂದರೆ ಸರಿ. ಸದರಿ ಮೂರು ವಸ್ತುಗಳನ್ನು ಸಹ ಪಂಚನಾಮೆ ಸಮಯದಲ್ಲಿ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ.

14) ನಾನು ಈಗ ನೊಡುತ್ತಿದ್ದ ಸೀರೆ , ಹಿತ್ತಾಳೆ ದೀಪ ಮತ್ತು ಕಡ್ಡಿಪೊಟ್ಟಣವನ್ನು ನನ್ನ ಸಮಕ್ಷಮ ಪಂಚನಾಮೆ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಅವುಗಳನ್ನು ಈಗಾಗಲೆ ಮುಮಾ-9 ರಿಂದ 11 ಎಂದು ಗುರುತಿಸಲಾಗಿದೆ. ಪಂಚನಾಮೆ ಸಮಯದಲ್ಲಿ ಕೊಠಡಿಯಲ್ಲಿ ಸೀಲೆಂಡರ್ ಗ್ಯಾಸ ಇಟ್ಟಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದಃ</u>

15) ನಮ್ಮ ಕಚೇರಿಯಲ್ಲಿ ಚಲನವಲನ ವಹಿಯನ್ನು ಇಟ್ಟಿರುತ್ತಾರೆ ಎಂದರೆ ಸರಿ. ನನಗೆ ತನಿಖಾಧಿಕಾರಿಗಳು ಪಂಚನಾಮೆಗೆ ಬರಲು ಲಿಖಿತದಲ್ಲಿ ನೋಟಿಸ ಕೊಟ್ಟಿರುವುದಿಲ್ಲ. ನಾನು ಚಲನವಲನ ವಹಿಯಲ್ಲಿ ಪಂಚನಾಮೆಗೆ ಹೋಗುತ್ತಿದ್ದ ಬಗ್ಗೆ ನಮೂದು ಮಾಡಿಲ್ಲ. ನಾನು ನಿಪಿ-8 ಪಂಚನಾಮೆ ಬರೆಯಲು ಮಾಹಿತಿ ಕೊಟ್ಟಿರುವುದಿಲ್ಲ. ಪಂಚನಾಮೆ ಬರೆಯಲು ಚಾಸಾ-39 ಚಿದಾನಂದ ರವರು ಅವರ ಸಿಬ್ಬಂದಿಗೆ ಮಾಹಿತಿ ಕೊಟ್ಟರು.

16) ನಾನು ನಕ್ಷೆಯನ್ನು ಬಿಡಿಸಲು ಮಾಹಿತಿ ನೀಡಿಲ್ಲ. ನಿಪಿ-9 ನಕ್ಷೆಯನ್ನು ಬಿಡಿಸಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇದೆ. ಪಂಚನಾಮೆಯಲ್ಲಿ ಸ್ವೇಟರ್ ಬಣ್ಣವನ್ನು ಮಾತ್ರ ಬರೆದಿದ್ದು , ಉಳಿದ ವಸ್ತುಗಳ ಬಣ್ಣದ ಬಗ್ಗೆ ಬರೆದಿಲ್ಲ. ಪಂಚನಾಮೆಯಲ್ಲಿ ಗುಲಾಬಿ ಬಣ್ಣದ ಸ್ವೇಟರ ಎಂದು ಬರೆಯಲಾಗಿದೆ. ಪಂಚನಾಮೆಯಲ್ಲಿ ಮನೆಯ ಯಾವ ಮೂಲೆಯಲ್ಲಿ ಏನು ಇದೆ ಎಂದು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

17) ಪಂಚನಾಮೆಯ ಎರಡನೇ ಪುಟದಲ್ಲಿ ನಾನು ಅಡ್ಡವಾಗಿ ಏಕೆ ಸಹಿ ಮಾಡಿರುತ್ತೇನೆಂದು ನನಗೆ ಗೊತ್ತಿಲ್ಲ. ನಾನು ಪಂಚನಾಮೆಯನ್ನು ಓದಿ ಸಹಿ ಮಾಡಿರುವುದಿಲ್ಲ. ಪೋಲಿಸರು ಹೇಳಿದ ಕಾರಣ ನಾನು ಮತ್ತು ಇನ್ನೊಬ್ಬರು ಪಂಚರು ಸಹಿ ಮಾಡಿರುತ್ತೇವೆ ಎಂದರೆ ಸರಿ.

ಛಾಯಾಚಿತ್ರವನ್ನು ಏಕೆ ತೆಗೆದಿರುತ್ತಾರೆಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಹಾಜರಾದ ಬಗ್ಗೆ ಛಾಯಾಚಿತ್ರವನ್ನು ತೆಗೆದಿರುತ್ತಾರೆ.

18) ನಿಪಿ-10 ಮತ್ತು 11 ರಲ್ಲಿ ಶವ ಕಾಣುತ್ತಿಲ್ಲ ಎಂದರೆ ಸರಿ. ಮುಮಾ-4 ರಿಂದ 11 ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಸಿಗುವ ವಸ್ತು ಎಂದರೆ ಸರಿ. ಅವುಗಳ ಮೇಲೆ ಯಾವುದೇ ವಿಶೇಷ ಗುರುತು ಇರುವುದನ್ನು ನಾನು ಗಮನಿಸಿಲ್ಲ. ನನ್ನ ಸಹಿಯನ್ನು ಚೀಟಿಗಳ ಮೇಲೆ ಪೋಲಿಸರು ತೆಗೆದುಕೊಂಡಿಲ್ಲ. ನಾನು ಪಂಚನಾಮೆ ಸಮಯದಲ್ಲಿ ಪಂಚನಾಮೆಗೆ 3 – 4 ಸಹಿ ಮಾಡಿರುತ್ತೇನೆ. ನಾನು ಸದರಿ ಸಹಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಸಹಿಗಳನ್ನು ಎಲ್ಲಿಯೂ ಮಾಡಿಲ್ಲ.

19) ನಾನು ನಿಪಿ-8 ಪಂಚನಾಮೆಗೆ ಹೋಗಿದ್ದೆ, ಅಲ್ಲಿ ನನ್ನ ಸಮಕ್ಷಮ ಪಂಚನಾಮೆ ಮಾಡಿ, ಮುಮಾ-4 ರಿಂದ 11 ಗಳನ್ನು ಅಮಾನತ್ತು ಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-8 ಮತ್ತು 9 ರ ಮೇಲೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.